(ಇಂದು ದಿನಾಂಕ 07-01-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

(ಸಾಕ್ಷಿದಾರರು ಕೊಂಕಣಿ ಭಾಷೆ ಮಾತನಾಡುವವರಾಗಿದ್ದರಿಂದ ವಕೀಲರಾಗಿರುವ ಶ್ರೀ ಸಿ.ಜಿ.ಎನ್. ವಕೀಲರನ್ನು ಕನ್ನಡ ಭಾಷೆಗೆ ಭಾಷಾಂತರ ಮಾಡಲು ನೇಮಿಸಿಕೊಳ್ಳಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಸ್.ಎಸ್.ಕೆ. ವಕೀಲರಿಂದಃ**

ನನ್ನ, ಆರೋಪಿ ಮತ್ತು ಆರೋಪಿಯ ಗಂಡನ ನಡುವೆ ಎಷ್ಟು ಹಣದ ವ್ಯವಹಾರ ಆಗಿತ್ತು ಎಂದರೆ ಸಾಕ್ಷಿ ನನ್ನ ಮತ್ತು ಆರೋಪಿತರ ನಡುವೆ ರೂ. 1,25,000-00 ಹಣದ ವ್ಯವಹಾರ ನಡೆದಿತ್ತು ಮತ್ತು

ಆರೋಪಿತಳ ಗಂಡನ ನಡುವೆ ಮತ್ತು ನನ್ನ ನಡುವೆ ರೂ. 5,00,000-00 ಹಣದ ವ್ಯವಹಾರ ನಡೆದಿತ್ತು. ಈ ವ್ಯವಹಾರವನ್ನು ಬಿಟ್ಟು ಬೇರೆ ಯಾವುದೇ ವ್ಯವಹಾರ ನನ್ನ, ಆರೋಪಿ ಮತ್ತು ಅವಳ ಗಂಡನ ನಡುವೆ ನಡೆದಿಲ್ಲ. ನಾನು ಆರೋಪಿತಳಿಗೆ ಮತ್ತು ಆಕೆಯ ಗಂಡನಿಗೆ ಹಣ ಕೊಟ್ಟ ದಿನಾಂಕ ಹೇಳಲು ಬರುವುದಿಲ್ಲ. ಆರೋಪಿತಳಿಗೆ ಮತ್ತು ಆಕೆಯ ಗಂಡನಿಗೆ ನಾನು ಚಕ್ ಮೂಲಕ ಹಣ ಕೊಟ್ಟಿದ್ದೇನೆ. ಆರೋಪಿತಳಿಗೆ ಕರ್ನಾಟಕ ಬ್ಯಾಂಕ್‌ಗೆ ಸಂಬಂಧಪಟ್ಟಂತೆ ನಾನು ಚೆಕ್ ಮೂಲಕ ಹಣ ಕೊಟ್ಟಿದ್ದೇನೆ. ಕರ್ನಾಟಕ ಬ್ಯಾಂಕ್‌ಗೆ ಸಂಬಂಧಪಟ್ಟಂತೆ ಬ್ಯಾಂಕ್ ಸ್ಟೇಟ್‌ಮೆಂಟ್‌ನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಹಾಜರುಪಡಿಸಲು ನನಗೆ ತೊಂದರೆ ಇರಲಿಲ್ಲ. ಆರೋಪಿತಳಿಗೆ ನಾನು ಯಾವುದೇ ಹಣವನ್ನು ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ಆದ್ದರಿಂದ ಬ್ಯಾಂಕ್ ಸ್ಟೇಟ್‌ಮೆಂಟ್‌ನ್ನು ಹಾಜರುಪಡಿಸಿಲ್ಲ ಅನ್ನುವುದು ಸರಿಯಲ್ಲ. ಆರೋಪಿತಳ ಗಂಡನಿಗೆ ನಾನು ಕೊಟ್ಟಂತಹ ಹಣಕ್ಕೆ ಆರೋಪಿ ಭದ್ರತೆಗಾಗಿ ಚೆಕ್‌ನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ನಿ.ಪಿ. 1 ರಲ್ಲಿ ನಾನೇ ಹಣವನ್ನು ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತಳ ಗಂಡ ಪಡೆದುಕೊಂಡ ಹಣಕ್ಕೂ ಮತ್ತು ಆರೋಪಿತಳಿಗೂ ಯಾವುದೇ ಸಂಬಂಧ ಇಲ್ಲ ಅನ್ನುವುದು ಸರಿಯಲ್ಲ. ಆರೋಪಿತಳ ಗಂಡ ಮತ್ತು ನನ್ನ ನಡುವೆ ಇದ್ದಂತಹ ಸಿ.ಸಿ. ನಂ. 1832/2024 ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಕಂತಿನ ಪ್ರಕಾರ ಕೊಡಬೇಕಾಗಿದ್ದು ಕೊಟ್ಟಿಲ್ಲ ಎಂದು ಹೇಳುತ್ತಾರೆ. ರಾಜಿಯಾದ ನಂತರ ಆರೋಪಿತಳ ಗಂಡ ರೂ. 1,00,000-00 ಹಣವನ್ನು ನಗದು ರೂಪದಲ್ಲಿ ನನಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆರೋಪಿತಳಿಗೆ ರೂ. 1,25,000-00 ಹಣವನ್ನು ನಾನು ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭದ್ರತೆಗಾಗಿ ಕೊಟ್ಟಂತಹ ಚೆಕ್‌ನ್ನು ನಾನೇ ಬರೆದುಕೊಂಡು ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ಆರೋಪಿತಳು ನನಗೆ ಯಾವುದೇ ಹಣ ಕೊಡಲು ಬಾಧ್ಯಸ್ಥರಲ್ಲ ಅನ್ನುವುದು ಸರಿಯಲ್ಲ. ಆರೋಪಿತಳು ಭದ್ರತೆಗಾಗಿ ಕೊಟ್ಟಂತಹ ಚೆಕ್‌ನ್ನು ನಾನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ